# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2053
ಮಾನ್ಯ ಸದಸ್ಯರ ಹೆಸರು : ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ವಿಷಯ : ನಂದಿ ಗಿರಿಧಾಮದಲ್ಲಿ ಕೈಗೊಂಡಿರುವ ಯೋಜನೆಗಳ ಬಗ್ಗೆ
ಉತ್ತರಿಸುವ ದಿನಾಂಕ : 27-03-2020
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಕೈಗೊಂಡಿರುವ ಯೋಜನೆಗಳು ಯಾವುವು; ಹಾಗೂ ಇದಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು; | ಕಳೆದ 5 ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಕೈಗೊಂಡಿರುವ ಹಾಗೂ ಕೈಗೊಳ್ಳುತ್ತಿರುವ ಕಾಮಗಾರಿಗಳ ವಿವರ ಹಾಗೂ ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಈ ನಂದಿ ಗಿರಿಧಾಮಕ್ಕೆ ರೂಪ್ ವೇ ಅನ್ನು ಅಳವಡಿಸಬೇಕೆನ್ನುವ ಅಪೇಕ್ಷೆ ಬಹು ವರ್ಷಗಳಿಂದ ಇದ್ದು ಈ ಅಪೇಕ್ಷೆಯನ್ನು ಈಡೇರಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು; | ನಂದಿ ಗಿರಿಧಾಮದಲ್ಲಿ ರೂಪ್ ವೇ ಅಳವಡಿಸಲು ಪ್ರವಾಸೋದ್ಯಮ ಇಲಾಖೆ ವತಿಯಿಂದ ಈವರೆಗೆ 3 ಬಾರಿ ಟೆಂಡರ್ ಅಹ್ವಾನಿಸಲಾಗಿದೆ. ಮೊದಲನೇ ಮತ್ತು ಎರಡನೇ ಟೆಂಡರ್ ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ತಾಂತ್ರಿಕವಾಗಿ ಅನರ್ಹಗೊಂಡಿರುತ್ತವೆ. ಮೂರನೇ ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳಲ್ಲಿ ಒಂದು ಸಂಸ್ಥೆ ತಾಂತ್ರಿಕವಾಗಿ ಅರ್ಹತೆಗಳಿಸಿದರೂ ಸದರಿಯವರ ಬಿಡ್ ಮೊತ್ತ ಹೆಚ್ಚಾಗಿದ್ದುದರಿಂದ, ಸದರಿ ಪ್ರಕ್ರಿಯೆಯನ್ನು ಕೈಬಿಡಲಾಗಿರುತ್ತದೆ. ಹೀಗೆ ಮೂರು ಬಾರಿ ಟೆಂಡರ್ ಪ್ರಕ್ರಿಯೆ ನಡೆಸಿದ್ದಾಗ್ಯೂ, ಅರ್ಹ ವಹಿವಾಟು ಸಲಹೆಗಾರ ಸಮಾಲೋಚಕ ಸಂಸ್ಥೆಗಳು ದೊರಕದ ಹಿನ್ನೆಲೆಯಲ್ಲಿ ಇಲ್ಲಿಯವರೆಗೆ ನಂದಿ ಗಿರಿಧಾಮಕ್ಕೆ ರೋಪ್ ವೇ ಅಳವಡಿಸುವ ಯೋಜನೆಯು ಕಾರ್ಯಗತವಾಗಿರುವುದಿಲ್ಲ.<br><br>ಈಗಾಗಲೇ ಈ ರೀತಿಯ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದ್ದು, ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ. |
| ಇ) | ಯಾವ ಕಾಲಮಿತಿಯೊಳಗೆ ಈ ರೂಪ್ ವೇ ಅನ್ನು ಅಳವಡಿಸಲಾಗುವುದು? | |

ಕಡತ ಸಂಖ್ಯೆ: ಟಿಒಆರ್ 124 ಟಿಡಿವಿ 2020

**(ಸಿ.ಟಿ.ರವಿ)**
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

# ಮಾನ್ಯ ವಿ. ಪ. ಸದಸ್ಯರು ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2053 ಕ್ಕೆ

## ಅನುಬಂಧ

### ಕಳೆದ 5 ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಗಿರಿಧಾಮದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ |
|---|---|---|---|
| | **ನಬಾರ್ಡ್ ಯೋಜನೆ** | | |
| 1 | ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕುನ, ನಂದಿಬೆಟ್ಟ ಪ್ರದೇಶದ ಬಳಿ ಮೋಟರ್ ರಸ್ತೆ (4.30 ಕಿ.ಮೀ) ಕೂಡು ರಸ್ತೆ ಅಭಿವೃದ್ಧಿ ಕಾಮಗಾರಿ **(2015-16)** | 263.49 | 263.49 |
| | **ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳ ಯೋಜನೆ** | | |
| 2 | ನಂದಿ ಗಿರಿಧಾಮದಲ್ಲಿರುವ ಹೋಟೆಲ್‌ಗಳು ಹಾಗೂ ಗೆಸ್ಟ್ ಹೌಸ್‌ಗಳ ಬಳಿ ಮಿನಿ ಘನ ತ್ಯಾಜ್ಯ ವಿಲೇವಾರಿ ಘಟಕ ಕಾಮಗಾರಿಗಳು **(2019-20)** | 50.00 | 500.00 |
| 3 | ವಿದ್ಯುತ್ ಸರಬರಾಜು ಕಲ್ಪಿಸುವುದು **(2019-20)** | 75.00 | |
| 4 | ಸೂಚನಾ ಫಲಕಗಳ ಅಳವಡಿಕೆ **(2019-20)** | 50.00 | |
| 5 | ಅಡ್ವೆಂಚರ್ ವಾಕ್ ವೇ ನಿರ್ಮಾಣ **(2019-20)** | 80.00 | |
| 6 | ವಾಹನ ನಿಲ್ದಾಣ ಕಾಮಗಾರಿ **(2019-20)** | 350.00 | |
| 7 | ಬಸ್ ಶೆಲ್ಟರ್, ಕ್ಯಾಟೀನ್, ಶೌಚಾಲಯ, ಟಿಕೆಟ್ ಕೌಂಟರ್, ಭದ್ರತಾ ಸಿಬ್ಬಂದಿ ಕೊಠಡಿ, ಲೈಟ್ಸ್, ಬೋಲಾರ್ಡ್ಸ್, ಕಲ್ಲಿನ ಬೆಂಚುಗಳು, ಪಿಕ್ನಿಕ್ ಟೇಬಲ್, ಇತ್ಯಾದಿ ಕಾಮಗಾರಿಗಳು **(2019-20)** | 250.00 | |
| 8 | ನೆಲ್ಲಿಕಾಯಿ ಬಸವಣ್ಣ ಪ್ರದೇಶ ನವೀಕರಣ ಕಾಮಗಾರಿ **(2019-20)** | 15.00 | |
| 9 | ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದ ಮಂಟಪ ನವೀಕರಣ ಕಾಮಗಾರಿ **(2019-20)** | 70.00 | |
| 10 | ರಕ್ಷಣಾ ಉದ್ದೇಶಕ್ಕಾಗಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸುವುದು. **(2019-20)** | 30.00 | |
| 11 | ಮುಖ್ಯ ಪ್ರವೇಶ ದ್ವಾರದ ಸೌಂದರೀಕರಣ ಕಾಮಗಾರಿ **(2019-20)** | 30.00 | |
| | **ಒಟ್ಟು ಮೊತ್ತ** | **1263.49** | **763.49** |